ನಮ್ಮ ಕಚೇರಿಯ ಕುಂಡದಿಂದಲೇ ಕಿತ್ತು ತಂದಿದ್ದ ಕೆಂಪು ಗುಲಾಬಿಯ ಹೂವು ಎಂದು ಗೊತ್ತಿದ್ದರೂ ನಾನು ರಾಜಕುಮಾರನಂತೆ ಅವರ ಕೈಯಿಂದ ಆ ಗುಲಾಬಿಯನ್ನು ತಕ್ಕೊಂಡು ತಿರು ತಿರುಗಿಸಿ ನೋಡಿ ಆಘ್ರಾಣಿಸುವೆನು. ಅವರ ಲಾಲ್ ಸಲಾಮಿಗೆ ನನ್ನಿಂದ ಪ್ರತಿ ಸಲಾಂ ಹೋಗದ್ದನ್ನು ಕಂಡು ಅವರು ಇನ್ನೊಮ್ಮೆ 'ಲಾಲ್ ಸಲಾಂ' ಅನ್ನುವರು. ಸಣ್ಣದಿರುವಾಗ ಅವರು ಹಾಗೆ 'ಲಾಲ್ ಸಲಾಂ' ಅಂದಾಗ ಪ್ರತಿಯಾಗಿ ನಾನು 'ಲಾಲ್ ಸಲಾಂ' ಹೇಳದಿದ್ದರೆ ಅವರು ನನ್ನ ಕಂಕುಳಿಗೆ ಕೈಹಾಕಿ ಜೀವ ಹೋಗುವ ಹಾಗೆ ಜಿಗುಟುತ್ತಿದ್ದರು. ಹುಡುಗನಾಗಿದ್ದ ನಾನು ಅವರು ಜಿಗುಟುವ ಮೊದಲೇ 'ಲಾಲ್ ಸಲಾಂ' ಎಂದು ಆ ನರಕದ ನೋವಿನಂತಹ ಜಿಗುಟುವಿಕೆಯಿಂದ ಪಾರಾಗುತ್ತಿದ್ದೆ. ಈಗ ಅವರಿಗೆ ವಯಸ್ಸಾಗಿರುವುದರಿಂದಲೂ ಜಿಗುಟುವ ಧೈರ್ಯವಾಗಲೀ ಶಕ್ತಿಯಾಗಲೀ ಇಲ್ಲದಿರುವುದರಿಂದಲೂ ಪ್ರತಿಬಾರಿಯೂ ಅವರು ಲಾಲ್ ಸಲಾಂ ಅಂದಾಗ ನಾನು 'ವ ಅಸ್ಸಲಾಮು ಅಲೈಕುಂ ಸ್ಸಲಾಂ' ಎನ್ನುವೆನು.

ಆಗ ಅವರ ಮುಖದಲ್ಲಿ ಬೆಂಕಿಯಂತಹ ಕೋಪ ಕಾಣಿಸಿಕೊಳ್ಳುವುದು. ಮೊದಲೇ ಕೆಂಪಗಿರುವ ಅವರ ಮುಖಕ್ಕೆ ಇನ್ನಷ್ಟು ರಕ್ತ ನುಗ್ಗಿ ಬಿಸಿಲು ಕಾಯುವ ಓತಿಯ ಹಾಗೆ ಅವರ ಮುಖ ಇನ್ನಷ್ಟು ಕೆಂಪಗಾಗಿ ಸ್ವಲ್ಪ ಹೊತ್ತಲ್ಲೇ ಅವರ ಸಿಟ್ಟೂ ಇಳಿದು ತಣ್ಣಗಾಗಿ ಮುಖದಲ್ಲಿ ಚಂದದ ನಗು ಮೂಡುವುದು.

ಈಗ ಎಷ್ಟೇ ಛೇಡಿಸಿದರೂ ಒಂದು ಕಾಲದಲ್ಲಿ ಕ್ರಾಂತಿಯ ದಾರಿಯಲ್ಲಿ ನಾನೇ ಮುನ್ನಡೆಸಿದ ಬಾಲಕನಲ್ಲವೇ ಇವನು ಎಂಬುದು ಅವರ ಪ್ರೀತಿಗೆ ಕಾರಣ. ಏನೇ ಅದರೂ ಇವರು ನನ್ನ ಪ್ರೀತಿಯ ಮಾಮನಲ್ಲವೇ ಎಂಬುದು ನನ್ನ ಮಮತೆಗೆ ಕಾರಣ. ಹಾಗಾಗಿ ಇವರು ಪ್ರತಿ ಸಲ ಬಂದಾಗಲೂ ಕಚೇರಿಯ ಕೆಂಪುಗುಲಾಬಿಯನ್ನು ಕಿತ್ತುಕೊಂಡಾಗಲೂ ಸುಮ್ಮನಿರುತ್ತಿದ್ದೆ. 'ನನ್ನ ಮಾಮ ಬಂದಾಗ ಒಂದು ಹೂ ಕಿತ್ತುಕೊಳ್ಳಲು ಅನುಮತಿಸು' ಎಂದು ಕಚೇರಿಯ ತೋಟಗಾರನಲ್ಲಿ ಕೇಳಿಕೊಂಡಿದ್ದೆ.

ಆ ತೋಟಗಾರನಿಗೂ ಆಲಿ ರೈಟರು ಎಂದರೆ ಇಷ್ಟ. ತೀಪಟ್ಟ ಮಲೆಯಿಂದ ಪ್ರತಿಸಲ ಬಂದಾಗಲೂ ಆತನಿಗೆ ಒಂದಿಷ್ಟು ಕಿತ್ತಳೆ ಹಣ್ಣನ್ನೋ, ಕಾಡುಬಾಳೆಯ ಚಿಪ್ಪನ್ನೋ ಕೊಟ್ಟು ದುಡಿಯುವ ವರ್ಗ ಒಗ್ಗಟ್ಟಾಗಬೇಕಾದ ಅನಿವಾರ್ಯತೆಯ ಕುರಿತು ಅವನೊಡನೆ ಮಾತನಾಡಿ ಹೋಗುತ್ತಿದ್ದರು.

ಇವರ ಮಾತಿನಿಂದ ಹಂಗಾಮೀ ತೋಟಗಾರನಾಗಿರುವ ಆತನಿಗೂ ತನ್ನ ಕಷ್ಟಗಳ ಅರಿವಾಗುತ್ತಿತ್ತು. ಹಾಗಾಗಿ, ಒಮ್ಮೊಮ್ಮೆ ಇವರು ದೂರದಲ್ಲಿ ಕಾಣಿಸಿಕೊಂಡಾಗ ತಾನೇ ಒಂದು ದಪ್ಪನೆಯ ಕೆಂಪು ಗುಲಾಬಿಯನ್ನು ಕಿತ್ತು ಇವರ ಕೈಗಿಡುತ್ತಿದ್ದನು. ಕಾಮ್ರೇಡ್ ಆಲಿ ರೈಟರು ನವಾಬನ ಶೈಲಿಯಲ್ಲಿ ಅದನ್ನು ಸ್ವೀಕರಿಸಿ ನನ್ನ ಕೈಗಿಟ್ಟು ಲಾಲ್ ಸಲಾಂ ಅನ್ನುತ್ತಿದ್ದರು.

'ಮಾಮಾ, ನಿಮ್ಮ ಕಾರ್ಮಿಕರ ರಾಜ್ಯ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ, ಅದಕ್ಕೂ ಮೊದಲು ನಮ್ಮ ಗುಲಾಬಿಯ ತೋಟ ಖಾಲಿಯಾಗುವ ಸಂಭವವಿದೆ' ಎಂದು ಛೇಡಿಸುತ್ತಿದ್ದೆ.

* * *

ಮೆಲ್ಲಗೆ ಒಳಬಂದು ಟಿಫನ್ ಕ್ಯಾರಿಯರನ್ನು ನೆಲದ ಮೇಲಿಟ್ಟು ಸುಮ್ಮನೆ ನಿಂತ ಕಾಮ್ರೇಡ್ ಆಲಿ ರೈಟರ ಮುಖ ನೋಡಿದೆ. ಕೈಯಲ್ಲಿ ಕೆಂಪು ಗುಲಾಬಿ ಇಲ್ಲದೇ ಒಳಬಂದ ಅವರು ಸಂಕಟ ತುಂಬಿಕೊಂಡು ನೋಡುತ್ತಿದ್ದರು. ನಸುಹಳದಿ ಬಣ್ಣಕ್ಕೆ ತಿರುಗುತ್ತಿದ್ದ ಬಿಳಿಯ ಪೈಜಾಮ. ಅದರ ಮೇಲೆ ಜೋಲಾಡುತ್ತಿದ್ದ ದೊಡ್ಡ ಸೈಜಿನ ಕೆಂಬಣ್ಣದ ಅಂಗಿ. ಅದರ ಮೇಲೆ ಚಳಿಗೆಂದು ಹಾಕಿಕೊಂಡಿದ್ದ ಕಂದುಬಣ್ಣದ ಸ್ವೆಟರು. ಕುತ್ತಿಗೆಯ ಸುತ್ತ ಮಂಕಾಗಿದ್ದ ಕಂದು ಬಣ್ಣದ ಮಫ್ಲರು. ಸುಕ್ಕುಸುಕ್ಕಾಗುತ್ತಿದ್ದ ಮುಖದ ಚರ್ಮ. ಅವರ ಕಿವಿಯ ಬಳಿಯ ಒಂದು ಅಗಲ ಮಚ್ಚೆ. ಅದರ ಮೇಲೆ ಬೆಳೆದ ಬಿಳಿಯ ರೋಮ. ತಲೆಯ ಮೇಲೆ ಮಡಚಿಕೊಂಡಿದ್ದ ಮಂಕಿಕ್ಯಾಪು. ಕಣ್ಣಲ್ಲಿ ಒಂದು ವಿಷಣ್ಣ ಭಾವ. ಆದರೆ, ಅವರ ಮೂಗಿನ ತುದಿ ಮಾತ್ರ ಹಾಗೇ ಕೆಂಪಗೆ ಸೂಕ್ಷ್ಮವಾಗಿ ಲೋಕದ ಸಮಸ್ತ ಆಗು ಹೋಗುಗಳನ್ನೂ ಅಮೂಲಾಗ್ರವಾಗಿ ಘ್ರಾಣಿಸುತ್ತಿರುವ ಹಾಗೆ ಹಾಗೇ ಉಳಿದುಕೊಂಡಿತ್ತು. ತೆಲಂಗಾಣದ ತೆಂಡು ಎಲೆ ಆಯುವ ಆದಿವಾಸಿಗಳಿಂದ ಹಿಡಿದು ಫಿಲಿಪ್ಪೈನ್ಸ್‌ನ ಬಂಡುಕೋರರವರೆಗೆ, ಕೇರಳದ ಭೂಗತ ಕಾಮ್ರೇಡರಿಂದ ಹಿಡಿದು ಪೆರುವಿನ ಗೆರಿಲ್ಲಾ ಹೋರಾಟಗಾರರವರೆಗೆ ಎಲ್ಲವನ್ನೂ